ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ, ಆಯುಕ್ತರ ಕಛೇರಿ, ನೃಪತುಂಗ ರಸ್ತೆ, ಬೆಂಗಳೂರು-560001.**

ಸಂಖ್ಯೆ :ಸಿ7(3)ಪ್ರಾಶಿಅ:ಖಾ.ಶಾ.ಮಾ.ನ:01:2021-22 ದಿನಾಂಕ:04ನೇ ಆಗಸ್ಟ್ 2021

*: : ಜ್ಞಾಪನಾ : :*

ವಿಷಯ: ಖಾಸಗಿ ಅನುದಾನಿತ /ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣವನ್ನು ಕರ್ನಾಟಕ ಶಿಕ್ಷಣ ಕಾಯ್ದೆ ಮತ್ತು ಆರ್.ಟಿ.ಇ ನಿಯಮಗಳಡಿಯಲ್ಲಿ ನೀಡುವ ಬಗ್ಗೆ.

ಉಲ್ಲೇಖ: ಕರ್ನಾಟಕ ಶಿಕ್ಷಣ ಕಾಯ್ದೆ-1983. ಸೆಕ್ಷನ್-36

2. ಕರ್ನಾಟಕ ಶಿಕ್ಷಣ ಕಾಯ್ದೆ(ಖಾಸಗಿ ಶಾಲೆಗಳ ನೊಂದಣಿ ಮತ್ತು ನಿಯಂತ್ರಣ) ನಿಯಮ- 1999 ಸರ್ಕಾರದ ಅಧಿಸೂಚನೆ ಸಂ:ಇಡಿ.137.ವಿವಿಧ.98, ದಿ:19/05/1999
3. ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ-2009.
4. ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ನಿಯಮಗಳು-2012.
5. ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ[ಸಿವಿಲ್] ಸಂಖ್ಯೆ:483/2004ರ ತೀರ್ಪು ದಿನಾಂಕ:13-4-2009.
6. ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.369.ಪಿಜಿಸಿ.2014, ದಿನಾಂಕ:11-11-2014
7. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಂ.ವ್ಯ.ಶಾ.ಇ.21.ಶಾಸನ.2017, ದಿ:22-4-2017 ಕರ್ನಾಟಕ ಶಿಕ್ಷಣ ಕಾಯ್ದೆ- [2ನೇ ಕಾಯ್ದೆಗಳ ತಿದ್ದುಪಡಿ
8. ಸರ್ಕಾರದ ಅಧಿಸೂಚನೆ ಸಂಖ್ಯೆಇಡಿ.709.ಪಿಜಿಸಿ.2017, ದಿನಾಂಕ:8-3-2018 [ಅಧಿಸೂಚನೆ-1] ಮತ್ತು ದಿನಾಂಕ:7-3-2018 [ಅಧಿಸೂಚನೆ-2 ಮತ್ತು 3]
9. ಸರ್ಕಾರದ ಆದೇಶ ಸಂಖ್ಯೆ:ಇಡಿ.587.ಪಿಜಿಸಿ.2018, ದಿನಾಂಕ:19-11-2018
10. ಈ ಕಛೇರಿ ಸುತ್ತೋಲೆ ಸಂಖ್ಯೆ:ಸಿ7[2]ಪ್ರಾಶಿಅ.ಮಾನ್ಯತೆ ಷರತ್ತು/23/2018-19, ದಿನಾಂಕ:30-11-2018

* * * * *

*ಪ್ರಸ್ತಾವನೆ:*

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ(1)ರ ಕರ್ನಾಟಕ ಶಿಕ್ಷಣ ಕಾಯ್ದೆ-1983ರ ಸೆಕ್ಷನ್-36ರ ಅಡಿಯಲ್ಲಿ ರಾಜ್ಯದಲ್ಲಿನ ಖಾಸಗಿ ಅನುದಾನಿತ/ಅನುದಾನರಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳು ಮಾನ್ಯತೆ ನವೀಕರಣ ಪಡೆಯುವುದು ಕಡ್ಡಾಯಗೊಳಿಸಲಾಗಿದೆ.

ಉಲ್ಲೇಖ(2)ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.137.ವಿವಿಧ.98, ದಿನಾಂಕ:19/05/1999ರಲ್ಲಿ ಕರ್ನಾಟಕ ಶಿಕ್ಷಣ ಕಾಯ್ದೆ ಸೆಕ್ಷನ್ 36 ಮತ್ತು 38ರಡಿ ಮಾನ್ಯತೆ ಹಾಗೂ ಮಾನ್ಯತೆ ನವೀಕರಣವನ್ನು ನೀಡುವ ಪ್ರಾಧಿಕಾರವನ್ನು ರಚಿಸಿ ಅಧಿಕಾರವನ್ನು ಪ್ರತ್ಯೋಜಿಸಲಾಗಿದೆ.

ಕರ್ನಾಟಕ ಶಿಕ್ಷಣ ಕಾಯ್ದೆ 1983 (ಕರ್ನಾಟಕ ಆಕ್ಟ್ 1 ಅಫ್ 1995)ರನ್ವಯ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.131.ವಿವಿಧ.98, ದಿನಾಂಕ:04/11/1999ರಲ್ಲಿ ನಿಯಮಗಳನ್ನು ರೂಪಿಸಲಾಗಿದೆ. ಈ ನಿಯಮದನ್ವಯ ಮಾನ್ಯತೆ ಅವಧಿ ಪೂರ್ಣಗೊಳ್ಳುವ ಒಂದು ತಿಂಗಳ ಮೊದಲು ಆಡಳಿತ ಮಂಡಳಿಗಳು ಸಂಬಂಧಿಸಿದ ಪ್ರಾಧಿಕಾರಕ್ಕೆ ಮಾನ್ಯತೆಯನ್ನು ನವೀಕರಿಸಲು ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ.

ಉಲ್ಲೇಖ(3)ರಲ್ಲಿ ಕೇಂದ್ರ ಸರ್ಕಾರವು ಆರ್.ಟಿ.ಇ ಕಾಯ್ದೆ 2009 ಅನ್ನು ಜಾರಿಗೆ ತಂದಿದ್ದು, ಉಲ್ಲೇಖ(4)ರಲ್ಲಿ ಸದರಿ ಕಾಯ್ದೆಯನ್ನು ರಾಜ್ಯ ಸರ್ಕಾರವು ಅಳವಡಿಸಿಕೊಂಡು ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ77.ಯೋಯೋಕ. 2010, ದಿನಾಂಕ:28/04/2012 ರಂದು ನಿಯಮಗಳನ್ನು ರೂಪಿಸಿ ಅಧಿಸೂಚನೆ ಹೊರಡಿಸಿರುತ್ತದೆ.

ಈ ಅಧಿಸೂಚನೆಯ ಕಂಡಿಕೆ(1)ರ ಉಪ ಕಂಡಿಕೆ(4)ರಲ್ಲಿ ಈ ರೀತಿಯಾಗಿ ಪಾಠ ಉದ್ಧರಿಸಲಾಗಿದೆ.

"The Provisions of these rules shall apply to all schools and shall have overriding effect over the provisions of rules made under the Karnataka Education Act 1983 (Karnataka Act 1 of 1995) to the extent of their repugnancy. Where no provisons are made in these rules, the provisions of other rules made under any other law shall continue to apply." ಆದ್ದರಿಂದ,

ಆರ್.ಟಿ.ಇ ನಿಯಮ–2012ರಲ್ಲಿ ಜಾರಿಗೆ ಬಂದನಂತರ ರಾಜ್ಯದ ಎಲ್ಲಾ ಖಾಸಗಿ ಅನುದಾನರಹಿತ/ಅನುದಾನಸಹಿತ ಪ್ರಾಥಮಿಕ ಶಾಲೆಗಳು ಮಾನ್ಯತೆಯನ್ನು ಆರ್.ಟಿ.ಇ ನಿಯಮ–11 ರಡಿಯಲ್ಲಿ ಪಡೆಯುವುದು ಕಡ್ಡಾಯವಾಗಿರುತ್ತದೆ.

ಉಲ್ಲೇಖ(5)ರ ಮಾನ್ಯ ಸರ್ವೋಚ್ಚ ನ್ಯಾಯಾಲಯದ ರಿಟ್ ಅರ್ಜಿ (ಸಿವಿಲ್) 483/2004, ದಿನಾಂಕ:13/04/2009ರಲ್ಲಿ ನೀಡಿರುವ ತೀರ್ಪಿನಂತೆ ಎಲ್ಲಾ ಶಾಲೆಗಳು ಕಡ್ಡಾಯವಾಗಿ ನ್ಯಾಷನಲ್ ಬಿಲ್ಡಿಂಗ್ ಕೋಡ್ (National Building Code) ಮತ್ತು ಅಗ್ನಿ ಸುರಕ್ಷತೆ (Fire Safety) ಪ್ರಮಾಣ ಪತ್ರಗಳನ್ನು ಸಂಬಂಧಿಸಿದ ಪ್ರಾಧಿಕಾರದಿಂದ ಪಡೆಯುವುದು ಕಡ್ಡಾಯಗೊಳಿಸಿ ಆದೇಶಿಸಿದೆ. ಈ ಆದೇಶದ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು ಎಲ್ಲಾ ಶಾಲೆಗಳು ಆರು ತಿಂಗಳಿಂದ ಒಂದು ವರ್ಷದೊಳಗಾಗಿ ಸುರಕ್ಷತಾ ಪ್ರಮಾಣ ಪತ್ರವನ್ನು ಪಡೆಯಲು ತಿಳಿಸಲಾಗಿದೆ.

ರಾಜ್ಯದ ಶಾಲೆಗಳಲ್ಲಿ ಸರ್ವೋಚ್ಚ ನ್ಯಾಯಾಲಯದ ಆದೇಶವನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸದೇ ಇರುವುದರಿಂದ ಉಲ್ಲೇಖ(9)ರ ಸರ್ಕಾರದ ಆದೇಶ ಹೊರಡಿಸಿದೆ ಮತ್ತು ಇಲಾಖೆಯಿಂದಲೂ ಸಹ ಉಲ್ಲೇಖ(10)ರ ದಿನಾಂಕ:30/11/2018ರಲ್ಲಿ ಸರ್ಕಾರದ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಲು ಸುತ್ತೋಲೆಯನ್ನು ಹೊರಡಿಸಲಾಗಿದೆ.

ಉಲ್ಲೇಖ(6)ರಲ್ಲಿ ರಾಜ್ಯ ಸರ್ಕಾರವು ಕರ್ನಾಟಕ ಎಜುಕೇಷನಲ್ ಇನ್ಸಿಟಿಟ್ಯೂಷನ್ (ರಿಜಿಸ್ಟ್ರೇಷನ್) ನಿಯಮ 2018 ರಲ್ಲಿ ಮಾನ್ಯತೆಯನ್ನು ನವೀಕರಿಸಲು ಐ.ಟಿ ಪೋರ್ಟಲ್ ಅಳವಡಿಸುವಂತೆ ಸೂಚಿಸಲಾಗಿದೆ. ಅದರಂತೆ ಆರ್.ಟಿ.ಇ ನಿಯಮದಡಿಯಲ್ಲಿ ಮಾನ್ಯತೆ ನವೀಕರಣವನ್ನು ಇಲಾಖೆಯು ಅಭಿವೃದ್ಧಿಪಡಿಸಿರುವ ತಂತ್ರಾಂಶದಲ್ಲಿ ಜಾರಿಗೊಳಿಸಲು ಹಾಗೂ ಆರ್.ಟಿ.ಇ ನಿಯಮದಡಿಯಲ್ಲಿ ಮಾನ್ಯತೆಯನ್ನು ನವೀಕರಿಸಲು ನಮೂನೆಗಳನ್ನು ಸಿದ್ದಪಡಿಸಿ ಆದೇಶ ಹೊರಡಿಸಲಾಗಿದೆ. ಅದರಂತೆ, ಆಡಳಿತ ಮಂಡಳಿಗಳು ಆನ್‌ಲೈನ್ ತಂತ್ರಾಂಶದಲ್ಲಿ ತಾಲ್ಲೂಕು/ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ನಮೂನೆ–1ರಲ್ಲಿ ತಿಳಿಸಿರುವ ಮಾಹಿತಿ/ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸುವುದನ್ನು ಕಡ್ಡಾಯಗೊಳಿಸಲಾಗಿದೆ. ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿನ ಶಾಲೆಗಳ ಆಡಳಿತ ಮಂಡಳಿಗಳು ನಮೂನೆ–1ರಲ್ಲಿ ಸಲ್ಲಿಸುವ ಪ್ರಸ್ತಾವನೆಯನ್ನು ಪರಿಶೀಲಿಸಿ ಶಾಲಾ ಭೇಟಿ ವರದಿಯೊಂದಿಗೆ ಪ್ರಸ್ತಾವನೆಯನ್ನು ಆನ್‌ಲೈನ್ ಮೂಲಕವೇ ಉಪನಿರ್ದೇಶಕರಿಗೆ ಸಲ್ಲಿಸಲು ತಿಳಿಸಲಾಗಿದೆ, ಉಪನಿರ್ದೇಶಕರು(ಆಡಳಿತ) ಇವರು ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಆನ್‌ಲೈನ್ ಮೂಲಕ ಸಲ್ಲಿಕೆಯಾಗುವ ಎಲ್ಲಾ ಪ್ರಸ್ತಾವನೆಗಳನ್ನು 15 ದಿನದೊಳಗಾಗಿ ನಿಯಮಾನುಸಾರ ಪರಿಶೀಲಿಸಿ ಇತ್ಯರ್ಥಪಡಿಸುವುದು ಮತ್ತು ನಮೂನೆ–2ರಲ್ಲಿ ಪ್ರಮಾಣ ಪತ್ರವನ್ನು ವಿತರಿಸುವುದು.

ಖಾಸಗಿ ಅನುದಾನರಹಿತ/ಅನುದಾನಸಹಿತ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಾನ್ಯತೆ ನವೀಕರಣದ ಪ್ರಾಧಿಕಾರವು ಉಪನಿರ್ದೇಶಕರು(ಆಡಳಿತ) ಆಗಿರುವುದರಿಂದ, ಆದರೆ, ಕೆಲವು ತಾಂತ್ರಿಕ ದೋಷದಿಂದಾಗಿ ಮಾನ್ಯತೆ ನವೀಕರಣವನ್ನು ಪೂರ್ಣ ಪ್ರಮಾಣದಲ್ಲಿ ತಂತ್ರಾಂಶದ ಮುಖಾಂತರ ನೀಡದಿರುವುದು ಗಮನಿಸಲಾಗಿದೆ.

ಆದ್ದರಿಂದ ಇನ್ನು ಮುಂದೆ ಖಾಸಗಿ ಅನುದಾನಿತ/ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣವನ್ನು ಆನ್ ಲೈನ್ ತಂತ್ರಾಂಶದ ಮೂಲಕ ಕಡ್ಡಾಯವಾಗಿ ಈ ಕೆಳಕಂಡ ಮಾಹಿತಿಗಳನ್ನು ಪರಿಶೀಲಿಸಿ ಸ್ಥಳ ಪರಿಶೀಲನೆ ಮಾಡುವಾಗ ಶಾಲೆಯಲ್ಲಿ ಕಲ್ಪಿಸಿರುವ ಮೂಲಭೂತ ಸೌಕರ್ಯಗಳ ಬಗ್ಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜಿ.ಪಿ.ಆರ್.ಎಸ್ ಮುಖಾಂತರ ವಿಡಿಯೋ ತೆಗೆಯತಕ್ಕದ್ದು, ಹಾಗೂ ಆ ದಾಖಲೆಗಳನ್ನು ಭೇಟಿ ನೀಡಿದ ಸಮಯ ದಿನಾಂಕದೊಂದಿಗೆ ಇಲಾಖೆ ಅಭಿವೃದ್ಧಿಪಡಿಸಿರುವ ಆನ್‌ಲೈನ್ ತಂತ್ರಾಂಶದಲ್ಲಿ ವರದಿಯೊಂದಿಗೆ ಅಪ್‌ಲೋಡ್ ಮಾಡುವುದು. ಈ ಎಲ್ಲಾ ಪ್ರಕ್ರಿಯೆಗಳು ಕ್ರಮವಾಗಿ ಇದ್ದಲ್ಲಿ ಮಾತ್ರ ಉಪನಿರ್ದೇಶಕರು 1 ರಿಂದ 5ನೇ ತರಗತಿ, 1 ರಿಂದ 8ನೇ ತರಗತಿ ಅಥವಾ 1 ರಿಂದ 10ನೇ ತರಗತಿಗಳ ಶಾಲೆಗಳ ಮಾನ್ಯತೆಯನ್ನು ನವೀಕರಿಸಲು ಸೂಚಿಸಲಾಗಿದೆ.

ಖಾಸಗಿ ಶಾಲೆಗಳು ಭದ್ರತಾ ಠೇವಣಿಯಾಗಿ ಶಾಲೆಯನ್ನು ನೋಂದಣಿ ಮಾಡಿದ ಸಾಲಿನಲ್ಲಿ ನಿಗಧಿಪಡಿಸಿದ ಮೊತ್ತವನ್ನು ಭದ್ರತಾ ಠೇವಣಿಯನ್ನು ಆಡಳಿತ ಮಂಡಳಿಯ ಕಾರ್ಯದರ್ಶಿಗಳು ಹಾಗೂ ಉಪನಿರ್ದೇಶಕರು(ಆಡಳಿತ) ಜಂಟಿ ಖಾತೆಯಲ್ಲಿ ಠೇವಣಿಯನ್ನು ಇಡತಕ್ಕದ್ದು.

| ತರಗತಿ | ಶಾಲೆ ಪ್ರಾರಂಭವಾದ ಸಾಲು/ವರ್ಷ 2014–15 ಸಾಲಿಗೆ ಪೂರ್ವದಲ್ಲಿ | ಶಾಲೆ ಪ್ರಾರಂಭವಾದ ಸಾಲು/ವರ್ಷ 2015–16ರ ಸಾಲಿನಿಂದ | ಶಾಲೆ ಪ್ರಾರಂಭವಾದ ಸಾಲು/ವರ್ಷ 2017–18ನೇ ಸಾಲಿನಿಂದ | ಸಂಸ್ಕರಣಾ ಶುಲ್ಕವು 2018ನೇ ಸಾಲಿನಿಂದ ಜಾರಿಗೆ ಬಂದಿದ್ದು (ಪ್ರತಿ ಮಾನ್ಯತೆ ನವೀಕರಣ ಪ್ರಕ್ರಿಯೆಯಲ್ಲಿ ಸಂಸ್ಕರಣ ಶುಲ್ಕವನ್ನು ಪಾವತಿಸತಕ್ಕದ್ದು) |
|---|---|---|---|---|
| | ಸ್ಥಿರ ನಿಧಿ ಠೇವಣಿ ಮೊತ್ತ | | | ಸಂಸ್ಕರಣಾ ಶುಲ್ಕ –2018ನೇ ಸಾಲಿನಿಂದ |
| ಪೂರ್ವ ಪ್ರಾಥಮಿಕ | – | – | – | 2,000/– |

| | | | | |
|---|---|---|---|---|
| 1 ರಿಂದ 4 / 1 ರಿಂದ 5ನೇ ತರಗತಿವರೆಗೆ | 10,000/– | 1.00 ಲಕ್ಷ | 2.00 ಲಕ್ಷ | 5,000/– |
| 5 ರಿಂದ 7, 6 ರಿಂದ 8ನೇ ತರಗತಿಯವರೆಗೆ | 20,000 | 2.00 ಲಕ್ಷ (ಕನ್ನಡ ಮಾಧ್ಯಮ)<br>5.00 ಲಕ್ಷ (ಆಂಗ್ಲ ಮಾಧ್ಯಮ) | | |
| 1 ರಿಂದ 7 / 1 ರಿಂದ 8ನೇ ತರಗತಿವರೆಗೆ, | 20,000/– | 2.00 ಲಕ್ಷ (ಕನ್ನಡ ಮಾಧ್ಯಮ)<br>5.00 ಲಕ್ಷ (ಆಂಗ್ಲ ಮಾಧ್ಯಮ) | | |
| 8 ರಿಂದ 10, 9 ಮತ್ತು 10ನೇ ತರಗತಿಗಳಿಗೆ | 30,000/– | 3.00 ಲಕ್ಷ (ಕನ್ನಡ ಮಾಧ್ಯಮ)<br>10.00 ಲಕ್ಷ (ಆಂಗ್ಲ ಮಾಧ್ಯಮ) | 3.00 ಲಕ್ಷ | 10,000/– |
| 1 ರಿಂದ 10ನೇ ತರಗತಿಗಳು | – | – | | |
| ಪೂರ್ವ ಪ್ರಾಥಮಿಕದಿಂದ 10ನೇ ತರಗತಿವರೆಗೆ | – | – | | |

ಭದ್ರತಾ ಠೇವಣಿಯನ್ನು ಶಾಲೆ ಪ್ರಾರಂಭವಾದ ವರ್ಷದಲ್ಲಿ ಇಡಲಾಗಿದ್ದ ಠೇವಣಿಯನ್ನೇ ಮುಂದುವರೆಸತಕ್ಕದ್ದು, **ಉದಾಹರಣೆ:** 1 ರಿಂದ 8ನೇ ತರಗತಿವರೆಗೆ ಶಾಲೆಯನ್ನು ನೋಂದಣಿ ಪಡೆದು ನಡೆಸುತ್ತಿದ್ದು ನಂತರ 9 ಮತ್ತು 10ನೇ ತರಗತಿ ಅಥವಾ 8 ರಿಂದ 10ನೇ ತರಗತಿ ಅನುಮತಿ ಪಡೆದಲ್ಲಿ ಆ ಶಾಲೆಗಳು ಪ್ರೌಢ ಶಾಲೆಗೆ ನಿಗಧಿಪಡಿಸಿರುವ ಭದ್ರತಾ ಠೇವಣಿಯನ್ನು ಇಡತಕ್ಕದ್ದು. 9 ಮತ್ತು 10ನೇ ತರಗತಿ ನೋಂದಣಿ ಪಡೆದಲ್ಲಿ ಆ ಶಾಲೆಯು ಹೊಸ ಪ್ರೌಢ ಶಾಲೆಯಾಗುತ್ತದೆ. 2018ರ ಹಿಂದೆ 8 ರಿಂದ 10ನೇ ತರಗತಿ ಹೊಸ ಪ್ರೌಢ ಶಾಲೆಯಾಗುತ್ತದೆ. 2018ರ ನಂತರ 1 ರಿಂದ 5ನೇ ತರಗತಿ, 6 ರಿಂದ 8ನೇ ತರಗತಿ, 9 ಮತ್ತು 10ನೇ ತರಗತಿಗಳನ್ನು ನೋಂದಣಿ ಮಾಡುತ್ತಿದ್ದು 1 ರಿಂದ 8ನೇ ತರಗತಿವರೆಗೆ ಪ್ರಾಥಮಿಕ ಶಾಲೆಯಾಗಿ, 9 ಮತ್ತು 10ನೇ ತರಗತಿ ಪ್ರೌಢ ಶಾಲೆಯಾಗಿ ನೋಂದಣಿ ಮಾಡಲಾಗುತ್ತದೆ. **(ಯಾವ ವರ್ಷ ಶಾಲೆಯು ಹೊಸ ಶಾಲೆಯಾಗಿ ನೋಂದಣಿಯಾಗಿರುತ್ತದೋ ಆ ವರ್ಷದಲ್ಲಿ ನಿಗಧಿಪಡಿಸಿದ ಭದ್ರತಾ ಠೇವಣಿ ಮೊತ್ತವನ್ನು ಜಂಟಿ ಖಾತೆಯಲ್ಲಿ ಇಡುವುದು)**

ಈಗಾಗಲೇ ಕರ್ನಾಟಕ ಶಿಕ್ಷಣ ಕಾಯ್ದೆ 1983 ಸೆಕ್ಷನ್ 6(ಎ)ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ.709.ಪಿಜಿಸಿ.2017, ಬೆಂಗಳೂರು, ದಿನಾಂಕ:07/03/2018ರಲ್ಲಿ ನಿಯಮವನ್ನು ಜಾರಿಗೆ ತಂದಿದ್ದು ಅದರ ಪಾಠ ಈ ರೀತಿ ಇರುತ್ತದೆ.

"6A.Amalgamation of Registration Certificates:- Every Governing Council running an educational institution under different registration certificates for impating pre-primary, primary secondary and higher secondary education or any part thereof at the same geographical location shall apply onlin for amalgamation of those ceritificates and for issue of a single UDISE code for the institution. There Shall not be any fee for this purpose"

ಈಗಾಗಲೇ ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ77.ಯೋಯೋಕ.2010, ದಿನಾಂಕ:28/04/2012ರಲ್ಲಿ ಹೊರಡಿಸಿರುವ ಅಧಿಸೂಚನೆಯಲ್ಲಿ ಕೆಳಕಂಡ ನಮೂನೆಗಳನ್ನು ನಿಗಧಿಪಡಿಸಲಾಗಿದೆ.

1. ನಿಯಮ–11(2) ರಂತೆ ನಮೂನೆ–1ರಲ್ಲಿ ಆಡಳಿತ ಮಂಡಳಿಯು ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅರ್ಜಿಯನ್ನು ಸಲ್ಲಿಸಬೇಕು. ಈ ಅರ್ಜಿಯ ನಮೂನೆಯಲ್ಲಿ ತಿಳಿಸಿರುವ ಎಲ್ಲಾ ಮಾಹಿತಿಗಳನ್ನು ಕಡ್ಡಾಯವಾಗಿ ಆನ್‌ಲೈನ್ ಮೂಲಕ ಸಲ್ಲಿಸುವುದು (ಅಪ್‌ಲೋಡ್ ಮಾಡುವುದು)
2. ನಿಯಮ–11(3)ರಂತೆ ಸ್ಥಳೀಯ ಪ್ರಾಧಿಕಾರ ನಿಗಧಿಪಡಿಸಿದ ಸಂಬಂಧಿಸಿದ ಕ್ಷೇತ್ರಶಿಕ್ಷಣಾಧಿಕಾರಿಗಳು ನಮೂನೆ–1ರಲ್ಲಿ ಸಲ್ಲಿಸಿದ ಎಲ್ಲಾ ಮಾಹಿತಿಗಳ ಬಗ್ಗೆ ಪರಿಶೀಲನೆ ನಡೆಸಿ, ನಿಯಮ11(4)ರಂತೆ ಸಂಬಂಧಿಸಿದ ಉಪನಿರ್ದೇಶಕರಿಗೆ ಶಿಫಾರಸ್ಸು ಮಾಡಬೇಕಾಗಿರುತ್ತದೆ.

3. ನಿಯಮ–11(5)ರಲ್ಲಿ ಸಂಬಂಧಿಸಿದ ಉಪನಿರ್ದೇಶಕರು ಪರಿಶೀಲನೆ ನಡೆಸಿ ಮಾನ್ಯತೆ ನವೀಕರಣ ಪತ್ರವನ್ನು ನಮೂನೆ–2ರಲ್ಲಿ ನೀಡಬೇಕಾಗಿರುತ್ತದೆ.
4. ನಿಯಮ–11(6)ರ ಪ್ರಕಾರ 5 ವರ್ಷಗಳಿಗೊಮ್ಮೆ ನವೀಕರಿಸಬೇಕಾಗಿರುತ್ತದೆ.
5. ನಮೂನೆ–1ರಲ್ಲಿ ಸೂಚಿಸಿರುವ ದಾಖಲೆಗಳನ್ನು ಸೇರಿದಂತೆ ಕಡ್ಡಾಯವಾಗಿ ಆಡಳಿತ ಮಂಡಳಿಗಳು ಕಟ್ಟಡ ಸುರಕ್ಷತಾ ಪತ್ರ (National Building Code) ಹಾಗೂ ಅಗ್ನಿ ಸುರಕ್ಷತೆ (Fire Safety) ಪ್ರಮಾಣ ಪತ್ರಗಳನ್ನು ಮತ್ತು ಕರ್ನಾಟಕ ಶಿಕ್ಷಣ (ಎರಡನೇ ತಿದ್ದುಪಡಿ) ಕಾಯ್ದೆ 25/2017 ದಿನಾಂಕ:22/04/2017ರಂದು ತಂದಿರುವ ತಿದ್ದುಪಡಿಸ ಆದೇಶದಂತೆ (5ಎ)ರಲ್ಲಿ ಮಕ್ಕಳ ರಕ್ಷಣೆ ಮತ್ತು ಸುರಕ್ಷತೆ ಬಗ್ಗೆ ನಿಯಮವನ್ನು ಸಂಖ್ಯೆ:ಇಡಿ.709.ಪಿಜಿಸಿ.2017, ದಿನಾಂಕ:8/3/2018 ರಲ್ಲಿ ಅಧಿಸೂಚಿಸಿ ವಿವರಿಸಲಾಗಿದೆ. ಈ ನಿಯಮಗಳನ್ನು ಈ ಆದೇಶ ಹೊರಡಿಸುವ ಮೊದಲು ನಡೆಯುತ್ತಿರುವ ಶಾಲೆಗಳು ಆರು ತಿಂಗಳಿಂದ ಒಂದು ವರ್ಷದೊಳಗೆ ಅಳವಡಿಸಿಕೊಳ್ಳಲು ತಿಳಿಸಲಾಗಿದೆ. ಹಾಗೂ ಸರ್ಕಾರದ ಸುತ್ತೋಲೆ ಸಂಖ್ಯೆ:ಇಪಿ.46.ಎಸ್‌ಹೆಚ್‌ಹೆಚ್.2020, ದಿನಾಂಕ:10–11–2020ರ ಆದೇಶದಂತೆ ಪ್ರಮಾಣ ಪತ್ರವನ್ನು ಹೊಂದಿರತಕ್ಕದ್ದು. ಹಾಗೂ ಸುತ್ತೋಲೆಯ ಕಂಡಿಕೆ[11]ನ್ನು ಪರಿಗಣಿಸುವಂತಿಲ್ಲ.

ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

***ಆದೇಶ:***

ಕರ್ನಾಟಕ ಶಿಕ್ಷಣ ಕಾಯ್ದೆ 1983 ಮತ್ತು ಆರ್.ಟಿ.ಇ ಕಾಯ್ದೆ 2009 ನಿಯಮ 2012ರಲ್ಲಿ ಅಧಿಕಾರಗಳನ್ನು ಪ್ರತ್ಯಾಯೋಜಿಸಿರುವ ಮೇರೆಗೆ ಖಾಸಗಿ ಅನುದಾನಸಹಿತ/ಅನುದಾನರಹಿತ ಶಾಲೆಗಳ ಮಾನ್ಯತೆ ನವೀಕರಣವನ್ನು ಇಲಾಖೆ ಸಿದ್ದಪಡಿಸಿರುವ ತಂತ್ರಾಂಶದ ಅಡಿಯಲ್ಲಿ ಆನ್‌ಲೈನ್ ಮೂಲಕ ಕಡ್ಡಾಯವಾಗಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ನೀಡುವ ಶಾಲಾ ಭೇಟಿ ವರದಿಯ ಆಧಾರದ ಮೇಲೆ ಉಪನಿರ್ದೇಶಕರು(ಆಡಳಿತ) ಇವರು ಪ್ರಾಥಮಿಕ ಮತ್ತು ಪ್ರೌಢ ಶಾಲೆಯ ಮಾನ್ಯತೆಗಳನ್ನು ನವೀಕರಿಸಲು ಆದೇಶಿಸಿದೆ. [ಹಾಲಿ ತಂತ್ರಾಂಶವು ಪರಿಷ್ಕರಣೆಯಲ್ಲಿದ್ದು ಪರಿಷ್ಕರಿಸಿದ ನಂತರ ಭೌತಿಕವಾಗಿ ನೀಡುವುದನ್ನು ನಿಷೇಧಿಸಿದೆ] ಇನ್ನು ಮುಂದೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಯಾವುದೇ ಕಾರಣಕ್ಕೂ ಶಾಲಾ ಮಾನ್ಯತೆಯನ್ನು ನವೀಕರಿಸಬಾರದೆಂದು ಈ ಮೂಲಕ ತಿಳಿಯಪಡಿಸಿದೆ.

ಆಯುಕ್ತರು,
ಸಾರ್ವಜನಿಕ ಶಿಕ್ಷಣ ಇಲಾಖೆ.

ಗೆ:

1. ಅಪರ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಕಲಬುರ್ಗಿ ವಿಭಾಗ.
2. ಸಾರ್ವಜನಿಕ ಶಿಕ್ಷಣ ಇಲಾಖೆಯ ಎಲ್ಲಾ ನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ವಿಭಾಗೀಯ ಸಹನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರುಗಳಿಗೆ ಅಗತ್ಯ ಕ್ರಮಕ್ಕಾಗಿ
5. ರಾಜ್ಯದ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ (ಇವರು ಎಲ್ಲಾ ಖಾಸಗಿ ಅನುದಾನರಹಿತ ಆಡಳಿತ ಮಂಡಳಿ ಹಾಗೂ ಅನುದಾನರಹಿತ ಶಾಲಾ ಮುಖ್ಯಸ್ಥರುಗಳಿಗೆ ಸುತ್ತೋಲೆಯನ್ನು ತಲುಪಿಸುವುದು)

**ಪ್ರತಿಯನ್ನು ಮಾಹಿತಿಗಾಗಿ**

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರ ಆಪ್ತ ಕಾರ್ಯದರ್ಶಿಗಳಿಗೆ ಕಳುಹಿಸುತ್ತಾ ಸದರಿ ವಿಷಯವನ್ನು ಮಾನ್ಯ ಸಚಿವರ ಅವಗಾಹನೆಗೆ ತರುವಂತೆ ಕೋರಿದೆ.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ, ಬೆಂಗಳೂರು.
3. ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ–ಕರ್ನಾಟಕ, ಬೆಂಗಳೂರು.
4. ಹಿರಿಯ ಸಹಾಯಕ ನಿರ್ದೇಶಕರು, ಇ–ಆಡಳಿತ ಶಾಖೆ, ಆಯುಕ್ತರ ಕಛೇರಿ, ಬೆಂಗಳೂರು ಇವರಿಗೆ ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದಕ್ಕಾಗಿ.
5. ಕಛೇರಿ ಪ್ರತಿ.